# ಚಾಂಗೋ ಸರೋವರ

ಗ್ಯಾಂಗ್ಟಕ್‌ಂದ 35 ಕಿ.ಮಿ. ದೂರದ ನಥುಲಾ ಪಾಸ್ ಗೆ ಹೋಗುವ ಅತ್ಯಂತ ಕಡಿದಾದ ಮಾರ್ಗದಲ್ಲಿ ಸಿಗುವ ಸುಂದರ ಸರೋವರ ಚಾಂಗೋ ಲೇಕ್. ಅತ್ಯಂತ ಎತ್ತರದಲ್ಲಿದೆ ಈ ಸರೋವರ. ಸುತ್ತಲಿನ ಪರ್ವತದ ಮಂಜು ಕರಗಿ ನೀರಧಾರೆಯಿಂದ ವರ್ಷವಿಡೀ ಸರೋವರ ತುಂಬಿಕೊಂಡು ಪರ್ವತಸಾಲಿನ ಛಾಯೆ ಅದರಲ್ಲಿ ಮೂಡುವುದನ್ನು ನೋಡುವುದೇ ಚೆಂದ.

ಸರೋವರದ ಬದಲಾಗುವ ಬಣ್ಣದಿಂದ ಈ ಪ್ರದೇಶದ ಭವಿಷ್ಯವನ್ನು ನಿರ್ಣಯಿಸುವಷ್ಟರ ಮಟ್ಟಿಗೆ ಇಲ್ಲಿನವರ ಜೀವನದಲ್ಲಿ ಹಾಸುಹೊಕ್ಕಾಗಿದೆ ಚಾಂಗೋ. ಸರೋವರದ ಸುತ್ತಲೂ ಯಾಕ್ ಪ್ರಾಣಿಗಳನ್ನು ಸುಂದರವಾಗಿ ಅಲಂಕರಿಸಿ ಸವಾರಿಗಾಗಿ ಬಳಸುತ್ತಾರೆ.

**-ಎಸ್. ಪ್ರಭಾವತಿ, ಬೆಂಗಳೂರು**





# ವಂಶಾವಳಿ ಹೇಳುವ ಹೆಳವರು

ಈ ಹೆಳವರು ಪ್ರತಿ ವರ್ಷ ತಮ್ಮ ಪಾಲಿಗೆ ಬಂದ ಊರು ಹಾಗೂ ಮನೆಗಳಿಗೆ ಭೇಟಿ ಕೊಟ್ಟು ಅವರ ಮನೆತನದ ವಂಶಾವಳಿಯನ್ನು ರಾಗವಾಗಿ ಹೇಳಿ ಹುಟ್ಟಿದ ಮಕ್ಕಳು, ಮೊಮ್ಮಕ್ಕಳ ಹೆಸರನ್ನು ಅವರ ವಂಶಾವಳಿ ಪುಸ್ತಕದಲ್ಲಿ ಸೇರಿಸುತ್ತಾರೆ. ಇದು ಹನ್ನೆರಡನೆಯ ಶತಮಾನದಿಂದಲೂ ರೂಢಿಯಲ್ಲಿದೆ.

ಸಂಗಪ್ಪ ಉದ್ದಪ್ಪ ಹೆಳವರ ಹೇಳುವಂತೆ ಈತನ ಪೂರ್ವಜರು ತಮ್ಮ ಸಂಸಾರ ಸಮೇತ ಬಂಡಿಯಲ್ಲಿಯೇ ಊರಿಂದೂರಿಗೆ ಸಂಚರಿಸುತ್ತಿದ್ದರು. ಒಂದೂರಿನಲ್ಲಿ ಬೀಡು ಬಿಟ್ಟು ತಮಗೆ ನಿಗದಿಪಡಿಸಿದ ಮನೆಗೆ ಹೋಗಿ ಅವರ ವಂಶಾವಳಿ ಹೇಳಿ ಅವರು ಕೊಟ್ಟ ಕಾಳು -ಕಡಿ, ದನ-ಕರುಗಳಿಗೆ ಮೇವನ್ನು ಅವರಿಂದ ಬಳುವಳಿ ತೆಗೆದುಕೊಂಡು ತಮ್ಮ ಜೀವನ ನಡೆಸುತ್ತಿದ್ದರು. ಉಳ್ಳವರು ಕುರಿ, ದನಕರುಗಳು, ಹಂಡೆ ಬಾಂಡೆ ಕೊಡುತ್ತಿದ್ದರಂತೆ. ಅಷ್ಟೇ ಅಲ್ಲ ಬಂಗಾರ ಸಹಿತ ಕಾಣಿಕೆ ಕೊಟ್ಟಿದ್ದುಂಟು. ಈ ವಂಶಾವಳಿ ಪುಸ್ತಕದಲ್ಲಿ ಮನೆತನದ ಗುರುಗಳು, ಅವರ ಪೂರ್ವದ ಊರು, ಮನೆಯ ದೇವರು, ಕುಲ ಮೊದಲಾದ ಮಾಹಿತಿ ಅದರಲ್ಲಿ ಲಭ್ಯವಿರುತ್ತದೆ. ಈಗ ಈ ಹೆಳವರ ಮಕ್ಕಳು ಚೆನ್ನಾಗಿ ಓದಿ ಸರಕಾರಿ ಕೆಲಸಕ್ಕೆ ಸೇರಿದ್ದರೂ ಹಿರಿಯರು ತಮ್ಮ ಈ ಮೂಲಕಸುಬು ಬಿಟ್ಟಿಲ್ಲವಂತೆ.

**-ಚಂದ್ರಕಾಂತ ಮ. ತಾಳಿಕೋಟಿ, ಬಾದಾಮಿ**



# ನಾಲ್ಕು ದಶಕ ಕಳೆದ ಗೌರಿ

ಜೇಡಿಮಣ್ಣಿನ ಈ ಗೌರಿ ಮೂರ್ತಿಯನ್ನು 1976ರಲ್ಲಿ ಕೇವಲ 25 ರುಪಾಯಿಗೆ ಖರೀದಿಸಿದ್ದು 41 ವರ್ಷಗಳು ಕಳೆದಿವೆ. ಪ್ರತಿ ಭಾದ್ರಪದ ಮಾಸದ ತದಿಗೆಯ ಗೌರಿಹಬ್ಬದಂದು ಈ ಮೂರ್ತಿಯನ್ನು ಹತ್ತಿಯಿಂದ ತಯಾರಿಸಿದ ಮಲ್ಲಿಗೆ ಮೊಗ್ಗಿನ ಜಡೆ ಮತ್ತಿತರ ಆಭರಣಗಳೊಂದಿಗೆ ಅಲಂಕಾರ ಮಾಡಿ ಪೂಜಿಸುತ್ತೇವೆ. ಕಿವಿಯ ಝುಮಕಿ, ಕಂಠಾಭರಣ ಎಲ್ಲವನ್ನೂ ನಾನೇ ಮಾಡಿರುವೆ. 41 ವರುಷಗಳಲ್ಲಿ ಹಲವಾರು ಊರುಗಳನ್ನು ನಾವು ಸುತ್ತಿ ಬಂದಿರುವೆವಾದರೂ ಈ ಮೂರ್ತಿಯನ್ನು ಜತನದಿಂದ ಕಾಪಾಡಿಕೊಂಡಿದ್ದು ಹೊಸದರಂತೆ ಕಂಗೊಳಿಸುತ್ತಿದೆ.

**-ಮಧುರ ಸುಬ್ರಹ್ಮಣ್ಯ, ಬೆಂಗಳೂರು**